Lift Irrigation Scheme, if a co-operative society is formed for that purpose.

ಶ್ರೀ ಪಿ. ಜಿ. ಸಿದ್ಧಾಂತಿ.—ಪ್ರಾರಂಭದ ಪರಿಶೀಲನೆ ಗಳನ್ನು ನಡೆಸಲಾಗಿದೆ ಎಂದು ತಿಳಿಸಿದೆ. ಇದಕ್ಕೆ ಎಷ್ಟು ಖರ್ಚು ತಗಲುತ್ತದೆ ಮತ್ತು ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆಂಬುದನ್ನು ತಿಳಿಸುತ್ತೀರಾ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಿಶೀಲನೆಮಾಡಿದ್ದರಲ್ಲಿ ನುಮಾರು ಅಂದಾಜು ಐವತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ; ಮತ್ತು 120 ಎಕರೆ ಜಮೀನು ಅದರಿಂದ ನೀರಾವರಿಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಈ ಹಳ್ಳಿಯ ಜನಸಂಖ್ಯೆ ಕೇವಲ 300. ಮೇಲಾಗಿ ಇವರೆಲ್ಲ ಹಿಂದುಳಿದ ಜನರು. ಇವರಿಗೆ 25 ಸಾವಿರ ರೂಪಾಯಿ ಕೊಡುವುದಕ್ಕೆ ಶಕ್ಯ ವಿಲ್ಲವೆನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅರ್ಧ ಭಾಗ ವನ್ನು ಹಳ್ಳಿಯವರು ಕೊಡಬೇಕೆಂದು ನಾನು ಹೇಳಲಿಲ್ಲ.

ಶ್ರೀ ಪಿ. ಜಿ. ಸಿದ್ಧಾಂತಿ.—(ಸಿ) ಭಾಗಕ್ಕೆ ಉತ್ತರ ವಾಗಿ " It can be considered for being taken up as a co-operative Lift Irrigation Scheme 'ಎಂದು ಹೇಳಿದ್ದೀರಿ. ಇದರ ಪ್ರಕಾರ ಆ ಹಳ್ಳಿಯ ಜನರು 25 ಸಾವಿರ ರೂಪಾಯಿ ಕೊಡಬೇಕಾಗುತ್ತದೆಯಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೋ-ಆಪರೇಟಿವ್ ಬೇಸಿಸ್ ಮೇಲೆ ಈ ಯೋಜನೆಯನ್ನು ತೆಗೆದುಕೊಂಡರೆ ಅವರು ಎಷ್ಟು ಹಣ ಕೊಡಬೇಕಾಗುತ್ತದೆನ್ನುವುದರಲ್ಲಿ ಆ ಪ್ರಾಂತದಲ್ಲಿ ಜಾರಿಯಲ್ಲಿರತಕ್ಕ Co-operative Act ಅನ್ವಯಿಸುತ್ತದೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಆ ಪ್ರಕಾರವಾಗಿ ಈ ಯೋಜನೆಗೆ ಖರ್ಚಾಗುವ 50 ಸಾವಿರ ರೂಪಾಯಿಗಳಲ್ಲಿ ಅರ್ಧಭಾಗವನ್ನು ಹಳ್ಳಿಯವರು ಕೊಡಬೇಕಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಲಿಫ್ಟ್ ಇರಿಗೇಷನ್ ಸ್ಕೀಂನಲ್ಲಿ, ಬಾವಿಯನ್ನು ತೆಗೆಸಿ ನೀರನ್ನು ಉಪಯೋಗ ಮಾಡುವವರಿಗೆ ವಿದ್ಯುಚ್ಛಕ್ತಿ, ಲೈಟ್‌ಹಾಕತಕ್ಕದ್ದು, ವಿದ್ಯುತ್ತನ್ನು ಒದಗಿಸುವುದು, ಅವರಿಗೆ ಬೇಕಾಗಿರತಕ್ಕ ಯಂತ್ರೋಪಕರಣಗಳನ್ನು ಸಾಲವಾಗಿ ಕೊಡುವುದು ಇವನ್ನೆಲ್ಲ ಸರ್ಕಾರದವರು ಮಾಡುತ್ತಾರೆ. ಕೋ-ಆಪರೇಟಿವ್ ಬೇಸಿಸ್‌ಮೇಲೆ ತೆಗೆದುಕೊಳ್ಳುವುದಕ್ಕೆ ಇಷ್ಟವಿದ್ದಪಕ್ಷದಲ್ಲಿ ಒಂದು ಕೋ-ಆಪರೇಟಿವ್ ಸೊಸೈಟಿಯನ್ನು ಮಾಡಿಕೊಂಡು ಅದರಂತೆ ಅವರು ಸಹಾಯವನ್ನು ಪಡೆಯಬಹುದು. ಒಂದು ವೇಳೆ ಮಾನ್ಯ ಸದಸ್ಯರ ಅಭಿಪ್ರಾಯ ಇದನ್ನು ಸರ್ಕಾರದವರೇ ತೆಗೆದುಕೊಳ್ಳಬೇಕೆಂದು ಇರುವುದಾದರೆ ಅದರ ಸಾಧ್ಯಾಸಾಧ್ಯತೆಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಸರ್ಕಾರದವರೇ ಇದನ್ನು ನಡೆಸಿಕೊಂಡರೆ ಆಗ ಹಳ್ಳಿಯವರ ಕಡೆಯಿಂದ betterment levy ತೆಗೆದುಕೊಳ್ಳುವುದಕ್ಕೆ ಅಧಿಕಾರ ಬರುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಲಿಫ್ಟ್ ಇರಿಗೇಷನ್ ಸ್ಕೀಂನಲ್ಲಿmaintenance expenditure ಹೆಚ್ಚಾಗಕ್ಕದ್ದು ನಮ್ಮೆಲ್ಲರ ಅನುಭವದಲ್ಲಿದೆ ಇದನ್ನೆಲ್ಲ ಪರಿಶೀಲನೆ ಮಾಡಿ ಈ ಕೆಲಸವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಒತ್ತಾಯಪಡಿಸಿದರೆ ನಾನಾಗಲೇ ಹೇಳಿದಂತೆ ಪರಿಶೀಲನೆಮಾಡಿ ಅದರ ಸಾಧ್ಯಾಸಾಧ್ಯತೆಗಳನ್ನು ನೋಡಿ ಅವರಿಗೆ ಸಹಾಯ ಮಾಡಿಕೊಡುವುದಕ್ಕೆ ಏರ್ಪಾಡುಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮೈನರ್ ಇರಿಗೇಷನ್ ಸ್ಕೀಂ ಪ್ರಕಾರವಾಗಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟುವುದಕ್ಕೆ ಬದಲಾಗಿ Common lift irrigation ಮಾಡಬೇಕೆಂದು ಈಗಿರುವ ಹಣಕಾಸಿನ ಮಂತ್ರಿಗಳು ಒಂದು ಯೋಜನೆಯನ್ನು ಹಾಕಿದ್ದರು. ಅದನ್ನೇನಾದರೂ implement ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಿರತಕ್ಕ ಮೈನರ್ ಇರಿಗೇಷನ್ ಸ್ಕೀಂನಲ್ಲಿ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳತಕ್ಕ ವಿಷಯ ಸೇರಿಲ್ಲ. ಆದರೆ ಈಗ ಅಲ್ಲಲ್ಲಿ ಲಿಫ್ಟ್ ಇರಿಗೇಷನ್ ಬಹಳ ಪಾಪ್ಯುಲರ್ ಆಗುತ್ತಿರುವುದರಿಂದ ಈ ವಿಷಯವನ್ನು ಪರ್ಯಾಲೋಚನೆ ಮಾಡಿ, ನಾನಾಕಡೆಗಳಲ್ಲಿ, ಹತ್ತಾರುಕಡೆ, ಜನ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ನೀರನ್ನು ಎತ್ತುವ ಉದ್ಯಮಗಳನ್ನು ಸರ್ಕಾರದವರು ಮೈನರ್ ಇರಿಗೇಷನ್ ಸ್ಕೀಂನಲ್ಲಿ ಸೇರಿಸಿ ಕೆಲಸಮಾಡಬೇಕೆನ್ನುವ ವಿಷಯವನ್ನು ಸರ್ಕಾರ ಪರ್ಯಾಲೋಚನೆಮಾಡುತ್ತಿದೆ. ಅದರ ಸಾಧ್ಯಾಸಾಧ್ಯತೆಗಳನ್ನು ನೋಡಿ ಅದರ ಬಗ್ಗೆ ಒಂದು ತೀರ್ಮಾನಕ್ಕೆ ಬರುತ್ತೇವೆ.

1-30 P.M.

ಶ್ರೀ ಟಿ.ಎಚ್. ಮೂಡಲಗಿರಿಗೌಡ.—ಈ ಯೋಜನೆಯನ್ನು ಹತ್ತಾರು ವರ್ಷಗಳಿಂದ ಯೋಚನೆಮಾಡುತ್ತಿದ್ದಾರೆ. ಮಂತ್ರಿಗಳು ಹೋದಕಡೆಗಳಲ್ಲಿ ಈ ವಿಚಾರವಾಗಿ ಭಾಷಣಗಳನ್ನು ಮಾಡುತ್ತಿದ್ದಾರೆ. ಆದರೆ ಕಾರ್ಯರೂಪದಲ್ಲಿ ಏನನ್ನೂ ಮಾಡಿಲ್ಲ. ಈಗ ಈ ರೀತಿ ಒಂದು ಯೋಜನೆ ಸರ್ಕಾರದ ಮುಂದಿದೆಯೇ?

ಅಧ್ಯಕ್ಷರು.—ಈ ಪ್ರಶ್ನೆಯಲ್ಲಿರುವುದು ಒಂದು ಕೆರೆಯ ವಿಚಾರ, ಇದಕ್ಕೆ ಸಂಬಂಧಪಟ್ಟಹಾಗೆ ಮಾತ್ರ ಪ್ರಶ್ನೆ ಕೇಳಬಹುದು.

ಶ್ರೀ ಕೆ. ಕೆಂಚಪ್ಪ.—ನೀಲಸೋಗೆ ಮತ್ತು ಗೊಲ್ಲಹಳ್ಳಿ ಸಂಬಂಧವಾಗಿ ಈ ಯೋಜನೆಯನ್ನು ಕೈಗೊಂಡುದರ ಅನುಭವವೇನು ?

ಅಧ್ಯಕ್ಷರು.—ಅಬ್ಬಿಹಾಳ್‌ಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿ.

ಶ್ರೀ ಕೆ. ಕೆಂಚಪ್ಪ.—ಒಂದುಕಡೆ ಮಾಡಿರತಕ್ಕ ಅನುಭವ ಹೇಗಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಉತ್ತರ ಹೇಳುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಎಲ್ಲಗೂ ಇಲ್ಲಗೂ ವ್ಯತ್ಯಾಸವಾಗುವುದಿಲ್ಲ.

ಅಧ್ಯಕ್ಷರು.—ವ್ಯತ್ಯಾಸವಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—ಅಲ್ಲಿ ಆಗಿರತಕ್ಕ ಅನುಭವಕ್ಕೂ ಇಲ್ಲಿಗೂ ವ್ಯತ್ಯಾಸವಾಗುತ್ತದೆಂದು ಅವರು ಹೇಳಲಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಈಗ ಎತ್ತಿರುವ ಪ್ರಶ್ನೆಯಲ್ಲಿರುವ ಕೆಲಸವನ್ನು ಮಾಡುವಾಗ ಅಲ್ಲಿನ ಅನುಭವವನ್ನು ಉಪಯೋಗಿಸಿಕೊಳ್ಳುತ್ತೇವೆ.

Feeder Channel to Karadi Village Tank

Q.—3249. Sri K. P. REVANNASIDDAPPA (Tiptur).—

Will the Government be pleased to state :—

(SRI K. P. REVANNASIDDAPPA)

whether, and if so, when representations were received for the sanction of a feeder channel to Karadi Village Tank of Tiptur Taluk ?

A.—Sri H. M. CHANNABASAPPA (Minister for Public Works and Electricity).—Yes, since two years.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎರಡುವರ್ಷಗಳಿಂದೀಚೆಗೆ ಅರ್ಜಿಗಳು ಬಂದಿವೆಯೆಂದು ಉತ್ತರದಲ್ಲಿ ತಿಳಿಸಿದೆ, ಐದಾರು ವರ್ಷಗಳಿಂದಲೂ ಮೂರು ಜನ ಪಬ್ಲಿಕ್‌ವರ್ಕ್ಸ್ ಮಂತ್ರಿಗಳು ಈ ಕೆಲಸವನ್ನು ಮಾಡಿಸಿಕೊಡುವುದಾಗಿ ಹೇಳಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಇರಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದೆ ಅರ್ಜಿ ಕೊಟ್ಟಿರುವುದಾದರೂ ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಈ ಕೆಲಸವನ್ನು ಮಾಡಿಸಿಕೊಡುವುದಿಲ್ಲವೆಂದು ನಾನು ಹೇಳಿಲ್ಲ; ಅದಷ್ಟು ಬೇಗ ಮಾಡಿಸುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರೈತರು ಅರ್ಜಿ ಕೊಟ್ಟರೆ ಅವರಿಗೆ ಎಂಡಾರ್ಸ್‌ಮೆಂಟು ಕೊಡುತ್ತೀರ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ವೇಳೆ ಕೊಡುತ್ತೇವೆ ಕೆಲವು ವೇಳೆ ಕೊಡುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಿದ್ದರೆ ಕೆಲವನ್ನು ಕನದ ಬುಟ್ಟಿಗೆ ಹಾಕುತ್ತೀರ ! (ನಗು!)

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿಯ ಭಾವನೆ ತಪ್ಪು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಿದ್ದರೆ, ಬಹಳ ಹಿಂದೆ ಅರ್ಜಿ ಬಂದಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು ವರ್ಷದಿಂದೀಚೆಗೆ ಸರ್ಕಾರಕ್ಕೆ ಬಂದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಿದ್ದರೆ ಹಿಂದಿನ ಪಬ್ಲಿಕ್ ವರ್ಕ್ಸ್ ಮಂತ್ರಿಗಳಿಗೆ ಅರ್ಜಿಗಳನ್ನೇ ಹಾಕಿಕೊಳ್ಳದೆ ಅವರು ಕೆಲಸಮಾಡಿಸಿಕೊಡುತ್ತೇವೆಂದು ಹೇಳಿದರೇ ಅಥವ ಅರ್ಜಿ ಬಂದಿದ್ದೂ, ಸರ್ಕಾರದ ಗಮನಕ್ಕೆ ಬರಲಿಲ್ಲವೆಂದು ಅರ್ಥವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರ ಹೇಳಿದ್ದೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ಕೆಲಸವನ್ನು ಮಾಡಿಸಿಕೊಡುತ್ತೇವೆಂದು ಮಂತ್ರಿಗಳು ಹೇಳಬೇಕಾದರೆ ಅರ್ಜಿಗಳು ಬಂದಿದ್ದುವೆಂದು ಅರ್ಥವಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರದಲ್ಲಿರುವುದೇ ಅರ್ಥ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬರಿಬರನೆ ಪ್ರಶ್ನೆಗಳಿಗೆ ಉತ್ತರವನ್ನೇನೋ ಹೇಳುತ್ತೀರಿ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. (ನಗು!)

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ತಿಳಿಸುವುದಾದರೆ, ಈ ಕೆಲಸವನ್ನು ಮಾಡಿಸಿಕೊಡುತ್ತೇವೆಂದು ಮಾತ್ರ ಹೇಳುತ್ತೇನೆ.

N.E.S. Block to Haveri

Q.—3433. Smt. SIDDAVVA MAILAR (Haveri).—

Will the Government be pleased to state :—

(*a*) the reasons for not including Haveri taluk in N.E.S. Scheme so far ;

(*b*) whether an N.E.S. Block would be allotted for Haveri taluk at least this year ;

(*c*) if so, when ?

A.—Sri H. C. LINGA REDDY (Deputy Minister for Planning and Development).—

(*a*) Haveri taluk will also be covered by the N.E.S. Scheme in due course. The number of blocks started in the State each year depends on the number of blocks allotted to the State by the Centre.

(*b*) and (*c*) No blocks will be alloted by the Centre during the current year 1958-59.

ಶ್ರೀಮತಿ ಸಿದ್ದವ್ವ ಮೈಲಾರ್.—1958ನೆಯ ಏಪ್ರಿಲ್ ಒಂದರವರೆಗೆ ಹತ್ತು ಬ್ಲಾಕ್‌ಗಳನ್ನು ಕೊಟ್ಟಿದ್ದಾರೆ, 1958-59ರಲ್ಲಿ 16 ಪ್ರಿ ಎಕ್ಸ್‌ಟೆನ್ಷನ್ ಬ್ಲಾಕ್‌ಗಳು ಪ್ರಾರಂಭವಾಗಿವೆ ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರದವರು ಕೊಟ್ಟ ಬ್ಲಾಕ್‌ಗಳನ್ನು ಹಂಚುವುದರಲ್ಲಿ ರಾಜ್ಯ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಯಾವ ಪ್ರದೇಶ ಹಿಂದುಳಿದಿವೆ, ಪಕ್ಕದ ತಾಲ್ಲೂಕುಗಳಲ್ಲಿ ಯಾವುದಕ್ಕೆ ಕೊಟ್ಟಿದೆ, ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪ್ರಜಾನುಖ್ಯೆ ಕಮ್ಯುನಿಟಿ ಡೆವಲಪ್‌ಮೆಂಟ್ ಪ್ರದೇಶದಲ್ಲಿ ಬಂದಿದೆ ಎಂಬುದನ್ನೆಲ್ಲಾ ಪರಿಶೀಲನೆಮಾಡಿಕೊಡುತ್ತಾರೆ.

ಶ್ರೀ ಎಸ್. ಆರ್. ರಾಮಯ್ಯ.—ಈ ವಿಷಯವನ್ನೆಲ್ಲಾ ಯಾರು ಹೇಳುವವರು ಅಥವಾ ವರದಿಮಾಡುವವರು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಳ್ಳುತ್ತೇವೆ.

ಶ್ರೀ ಎಸ್. ಆರ್. ರಾಮಯ್ಯ.—ಪ್ರಜಾಪ್ರತಿನಿಧಿಗಳನ್ನು ವಿಚಾರಮಾಡಿ, ಅವರ ಅಭಿಪ್ರಾಯ ಪಡೆದು ಕೊಡುವ ಪದ್ಧತಿ ಇದೆಯೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಪ್ರತಿನಿಧಿಗಳನ್ನು ಕೇಳಿ ಕೊಡುವುದಿಲ್ಲ, ಆದರೆ ಅನೇಕ ಸಂದರ್ಭಗಳಲ್ಲಿ ಆಯಾ ತಾಲ್ಲೂಕಿನ ಪರಿಸ್ಥಿತಿಯನ್ನು ಅವರಿಂದ ತಿಳಿಯುತ್ತೇವೆ.

Sri G. B. SHANKAR RAO.—The question (*a*) is very specific and it is about the reasons for not including Haveri Taluk in N.E.S. Scheme so far and the answer to it is evasive and it is not an answer at all.

Mr. SPEAKER.—The Hon'ble Member cannot say that it is no answer at